**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ**

**ಎಸ್.ಸಿ .ನಂಃ 201/ 2022**

**ಚಾಸಾ-6, ಪ್ರಾಸಾ-6**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ |
| ತಂದೆಯ ಹೆಸರು | : | ದೊಡ್ಡ ಚನ್ನಯ್ಯ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಖಾಸಗಿ ಕೆಲಸ |
| ವಾಸಸ್ಥಳ | : | ಬೆಂಗಳೂರು. |

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದ ದಿನಾಂಕಃ 19.08.2025.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ತಂಗಿ. ಚಾಸಾ-4 ಹಾಗೂ 5 ನನ್ನ ತಂದೆ ತಾಯಿ. ಚಾಸಾ-7 ನನ್ನ ಭಾವ. 1 ನೇ ಆರೋಪಿ ಚಾಸಾ-1 ರವರ ಗಂಡ. ಉಳಿದ ಆರೋಪಿತರು 1 ನೇ ಆರೋಪಿಯ ಸಂಬಂದಿಕರು.

2. ಚಾಸಾ-1 ಹಾಗೂ 1 ನೇ ಆರೋಪಿಯ ಮದುವೆ ಸುಮಾರು 12 ವರ್ಷಗಳ ಹಿಂದೆ ಹೊಳೆನರಸೀಪುರದಲ್ಲಿ ಜರುಗಿತ್ತು. ಅವರಿಗೆ ಒಬ್ಬ ಗಂಡು ಮಗ ಹಾಗೂ ಒಬ್ಬ ಹೆಣ್ಣು ಮಗಳು ಇರುತ್ತಾರೆ. ಮದುವೆಯ ನಂತರ ಚಿಕ್ಕಬಾಗನಹಳ್ಳಿಯಲ್ಲಿ ವಾಸವಿದ್ದರು. ಮದುವೆಯ ನಂತರ ಸ್ವಲ್ಪ ದಿವಸ ಸಂಸಾರ ಚೆನ್ನಾಗಿಯೇ ಇತ್ತು. ಆನಂತರ ಆರೋಪಿತನ ಕಡೆಯವರು ಚಾಸಾ-1 ರವರಿಗೆ ಬೈಯ್ಯುವುದು ಹಾಗೂ ಹೊಡೆಯುವುದು ಮಾಡುತ್ತಿದ್ದರು. ನಂತರ ಇಬ್ಬರ ನಡುವೆ ರಾಜಿ ಸಂದಾನ ಮಾಡಿ, ಸಾಲಗಾಮೆ ರಸ್ತೆಯಲ್ಲಿರುವ ದ್ಯಾವಪ್ಪನ ಕೊಪ್ಪಲಿನಲ್ಲಿ ಬಾಡಿಗೆ ಮನೆ ಮಾಡಿ ಇರಿಸಿದ್ದರು. 1 ನೇ ಆರೋಪಿಯು ವೃತ್ತಿಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು. ಅಲ್ಲಿಯೂ ಸಹ 1 ನೇ ಆರೋಪಿಯು ಚಾಸಾ-1 ರವರ ಜೊತೆ ಗಲಾಟೆ ತೆಗೆದು ಹಲ್ಲೆ ಮಾಡಿರುತ್ತಾನೆ. ಸದರಿ ವಿಚಾರವನ್ನು ಚಾಸಾ-1 ರವರು ನನಗೆ ತಿಳಿಸಿರುತ್ತಾರೆ. ವಿಚಾರವನ್ನು ತಿಳಿದ ನಾನು 1 ನೇ ಆರೋಪಿಗೆ ಫೋನ್ ಮುಖಾಂತರ ಬುದ್ದಿಮಾತನ್ನು ಹೇಳಿದ್ದು, ಅದನ್ನು ಕೇಳದೆ 1 ನೇ ಆರೋಪಿಯು ನಾನು ಬೆಂಗಳೂರಿನಿಂದ ಬರುವುದಕ್ಕೂ ಮುಂಚೆ ಅಂದರೆ ಸುಮಾರು ನಾಲ್ಕು ವರ್ಷದ ಹಿಂದೆ 1 ನೇ ಆರೋಪಿಯು ಮಕ್ಕಳನ್ನು ಸರಿಯಾಗಿ ನೋಡಿಕೊಳ್ಳದಿದ್ದ ಕಾರಣ ಚಾಸಾ-1 ರವರು

ಪ್ರಶ್ನಿಸಿದ್ದು ಇದರಿಂದಾಗಿ 1 ನೇ ಆರೋಪಿಯು ಚಾಸಾ-1 ರವರಿಗೆ ಹಲ್ಲೆ ಮಾಡಿದ್ದರಿಂದ ನಾವು ಪೋಲಿಸರಿಗೆ ದೂರನ್ನು ಸಲ್ಲಿಸಿರುತ್ತೇವೆ.

**ಪಾಟೀಸವಾಲುಃ 1 ಹಾಗೂ 3 ರಿಂದ 6 ನೇ ಆರೋಪಿತರ ಪರ ಶ್ರೀ ಎ.ಜೆ.ಆರ್ ವಕೀಲರಿಂದಃ**

3. 1 ನೇ ಆರೋಪಿ ಹಾಗೂ ಚಾಸಾ-1 ರವರು ಮದುವೆಯಾದ ಒಂದು ವರ್ಷದ ತನಕ ಚೆನ್ನಾಗಿಯೇ ಇದ್ದರು. ಆ ಸಮಯದಲ್ಲಿ ನಾನು ಬೆಂಗಳೂರಿನಲ್ಲಿ ವಾಸವಿದ್ದೆ. ಆ ಸಮಯಕ್ಕೆ ನನಗೂ ಸಹ ಮದುವೆಯಾಗಿತ್ತು. ನಾನು ಸಂಸಾರ ಸಮೇತ ಬೆಂಗಳೂರಿನಲ್ಲಿ ವಾಸವಿದ್ದೆ. ಘಟನೆಯ ವಿಚಾರವನ್ನು ಚಾಸಾ-1 ರವರು ನನಗೆ ಪೋನ್ ಮುಖಾಂತರ ತಿಳಿಸಿರುತ್ತಾರೆ. ಮೊದಲನೆ ಬಾರಿ ಗಲಾಟೆಯಾದಾಗ ರಾಜಿ ಸಂದಾನ ಮಾಡಿ ನಂತರವೂ ಸರಿ ಹೋಗದ ಕಾರಣ ಗೊರೂರಿನ ಪೋಲಿಸ ಠಾಣೆಯಲ್ಲಿ ಒಂದು ದೂರನ್ನೂ ಸಹ ಸಲ್ಲಿಸಿದ್ದೆವು. ಈ ವಿಚಾರವನ್ನು ಈ ಪ್ರಕರಣದಲ್ಲಿ ದೂರನ್ನು ಸಲ್ಲಿಸುವ ಸಂದರ್ಭದಲ್ಲಿ ಪೋಲಿಸರಿಗೆ ತಿಳಿಸಿರುತ್ತೇವೆ. ಚಾಸಾ-1 ರಿಂದ 5 ಹಾಗೂ 7 ರವರು ನನ್ನ ಸಂಬಂದಿಕರು ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರನ್ನು ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದು, ಆತನ ಮಕ್ಕಳನ್ನೂ ಸಹ ಚೆನ್ನಾಗಿಯೇ ನೋಡಿಕೊಳ್ಳುತ್ತಿದ್ದು ಹಾಗೂ ಚಾಸಾ-4 ಹಾಗೂ 5 ರವರು ಚಾಸಾ-1 ರವರಿಗೆ 1 ನೇ ಆರೋಪಿಯನ್ನು ಹೊರಗೆ ಕರೆದುಕೊಂಡು ಹೋಗಿ ಬೇರೆ ಕಡೆ ಬಾಡಿಗೆ ಮನೆ ಮಾಡಿಕೊಂಡು ವಾಸ ಮಾಡುವಂತೆ ಪ್ರಚೋದಿಸುತ್ತಿದ್ದು, ಇದರಿಂದಾಗಿ ಈ ಸುಳ್ಳು ಪ್ರಕರಣವನ್ನು ದಾಖಲೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದು ಪ್ರಕರಣ ಸಂಬಂದ ಯಾವುದೇ ವೈಯಕ್ತಿ ಮಾಹಿತಿ ಇಲ್ಲದಿದ್ದರೂ ಸಹ ಚಾಸಾ-4 ಹಾಗೂ 5 ರವರ ಕೋರಿಕೆಯ ಮೇರೆಗೆ ಆರೋಪಿತರ ವಿರುದ್ದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಸಮಕ್ಷಮ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ

3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ಹಾಸನ.